ನಾಗಮಂಗಲದಲ್ಲಿ ನಾಗರಂಗ ನಾಟಕೋತ್ಸವ: ಗುಬ್ಬಿ ವೀರಣ್ಣರ ಸೇವೆ ಸ್ಮರಿಸಿದ ಹಂ.ಪ.ನಾ

ರಂಗಭೂಮಿ ಇತಿಹಾಸವೇ ಹಿರಿದು

ನಾಗಮಂಗಲ: ನಾಟಕ, ರಂಗಭೂಮಿ ಮತ್ತು ಕಲಾವಿದರ ಇತಿಹಾಸ ಬಹಳ ದೊಡ್ಡದು. ರಂಗಭೂಮಿಗೆ ದೊಡ್ಡ ವೈಭವ ತಂದುಕೊಟ್ಟ ಗುಬ್ಬಿ ವೀರಣ್ಣ ಅವರನ್ನು ಎಂದಿಗೂ ಕೂಡ ಮರೆಯಬಾರದು ಎಂದು ಖ್ಯಾತ ಸಾಹಿತಿ ಮತ್ತು ಸಂಸ್ಕೃತಿ ಚಿಂತಕ ನಾಡೋಜ ಡಾ.ಹಂ.ಪ.ನಾಗರಾಜಯ್ಯ ಅಭಿಪ್ರಾಯಪಟ್ಟರು.

ಪಟ್ಟಣದ ಸರ್ಕಾರಿ ಪದವಿಪೂರ್ವ ಕಾಲೇಜು ಆವರಣದ ಸಾಂಸ್ಕೃತಿಕ ಚಿಂತಕ ದಿ.ಚಿದಂಬರರಾವ್ ಜಂಬೆ ಅವರ ನೆನಪಿನ ವೇದಿಕೆಯಲ್ಲಿ ನಾಗಮಂಗಲ ಕನ್ನಡ ಸಂಘ ಆಯೋಜಿಸಿರುವ 18ನೇ ವರ್ಷದ ರಾಜ್ಯಮಟ್ಟದ ನಾಗರಂಗ ನಾಟಕೋತ್ಸವ ಉದ್ಘಾಟನಾ ಸಮಾರಂಭದಲ್ಲಿ ನುಡಿ ಗೌರವ ಸ್ವೀಕರಿಸಿ ಮಾತನಾಡಿ, ಗುಬ್ಬಿ ವೀರಣ್ಣ ಅವರು ನಮ್ಮ ನಿಮ್ಮಂತೆ ಶಾಲೆ, ಕಾಲೇಜು, ವಿಶ್ವವಿದ್ಯಾನಿಲಯಗಳಲ್ಲಿ ಕಲಿತವರಲ್ಲ. ಆದರೆ ಅವರನ್ನು ಕುರಿತಾದ ಪಾಠಗಳು ವಿಶ್ವವಿದ್ಯಾಲಯಗಳಲ್ಲಿವೆ ಎಂದರು.

ರಾಜ್ಯದಲ್ಲಿ ಶ್ರೇಷ್ಠ ನಟರು, ನಿರ್ದೇಶಕರಿದ್ದಾರೆ. ಅಂತಹ ಶ್ರೇಷ್ಠ ನಿರ್ದೇಶಕರ ಶ್ರೇಣಿಯಲ್ಲಿ ಖ್ಯಾತಿಪಡೆದಿರುವ ರಂಗಕರ್ಮಿ ಮತ್ತು ಸಾಂಸ್ಕೃತಿಕ ಚಿಂತಕ ದಿ.ಚಿದಂಬರರಾವ್ ಜಂಬೆ ಅವರ ನೆನಪಿನ ವೇದಿಕೆಯಲ್ಲಿ ನಾಗರಂಗ ನಾಟಕೋತ್ಸವ ನಡೆಸುತ್ತಿರುವ ಕನ್ನಡ ಸಂಘದ ಪದಾಧಿಕಾರಿಗಳಿಗೆ ಎಷ್ಟು ಕೃತಜ್ಞತೆ ಸಲ್ಲಿಸಿದರೂ ಸಾಲದು ಎಂದು ಶ್ಲಾಘಿಸಿದರು.

ನಾಡಿನಲ್ಲಿ ಜಾನಪದ ಕಲೆಯನ್ನು ಗುರುತಿಸದ ಮತ್ತು ವಿಶ್ವವಿದ್ಯಾಲಯಗಳ ಮೆಟ್ಟಿಲು ಏರದಂತಹ ಕಾಲಘಟ್ಟದಲ್ಲಿಯೇ ಮೊಟ್ಟಮೊದಲ ಬಾರಿಗೆ ರಾಜ್ಯಮಟ್ಟದ ಜಾನಪದ ಸಮ್ಮೇಳನವನ್ನು ಆಯೋಜಿಸಿ ಇತಿಹಾಸ ಸೃಷ್ಟಿಸಿದ್ದು ನಾಗಮಂಗಲ. ಕಲೆ ಹಾಗೂ ಕಲಾವಿದರನ್ನು ಗೌರವಿಸುವ ಮೂಲಕ ಸಂಸ್ಕಾರ ಮತ್ತು ಸಂಸ್ಕೃತಿಗೆ ನಾಗಮಂಗಲದ ನೆಲ ರಾಯಭಾರಿಯಾಗಿದೆ ಎಂದರೆ ತಪ್ಪಾಗಲಾರದು. ಆಧುನಿಕ ಕಾಲದಲ್ಲಿಯೂ ನಾಡಿನ ರಂಗಭೂಮಿಯ ಕಲೆ, ಸಾಹಿತ್ಯ, ಸಂಸ್ಕೃತಿ, ಸಂಸ್ಕಾರವನ್ನು ಪೋಷಿಸುವ ಕೆಲಸ ಮಾಡುತ್ತಿರುವ ಇಲ್ಲಿನ ಕನ್ನಡ ಸಂಘದ ಕಾರ್ಯ ನಿಜಕ್ಕೂ ಶ್ಲಾಘನೀಯ ಎಂದು ಬಣ್ಣಿಸಿದರು.

ರಂಗ ಗೌರವ ಸ್ವೀಕರಿಸಿದ ನಟ, ನಿರ್ದೇಶಕ ಪ್ರಶಾಂತ ಹಿರೇಮಠ ಮಾತನಾಡಿ,



ಕೆಲ ಜೀವಗಳು ಹಾಗೂ ಮನುಷ್ಯರು ಪರಸ್ಪರ ಹಂಚಿಕೊಂಡ ನಿಸ್ವಾರ್ಥ ನಂಟುಗಳು ಮಾತ್ರ ಕಾಲದ ಯಾವ ಹೊಡತಕ್ಕೂ ಮಸುಕಾಗದೆ ಹೃದಯದ ಗರ್ಭಗುಡಿಯಲ್ಲಿ ದೀಪದಂತೆ ಸದಾ ಬೆಳಗುತ್ತವೆ. ಕಳೆದ 34ವರ್ಷಗಳ ಹಿಂದೆ ನಾನು ನಾಗಮಂಗಲಕ್ಕೆ ಭೇಟಿಕೊಟ್ಟಾಗ ನನಗೆ ಕಂಡದ್ದು ಕನ್ನಡಸಂಘ ಮಾತ್ರವಲ್ಲ. ನನಗಾಗಿ ತಮ್ಮ ಎದೆಬಾಗಿಲನ್ನೇ ತೆರೆದುನಿಂತಿದ್ದ ಒಂದು ಅಪೂರ್ವ ಬೆಚ್ಚನೆಯ ರಂಗಭೂಮಿ ಎಂದು ಹಿಂದಿನದ್ದನ್ನು ಸ್ಮರಿಸಿಕೊಂಡರು.

ರಂಗಭೂಮಿ ಎನ್ನುವುದು ಎಂದಿಗೂ ಒಬ್ಬರ ಸಾಧನೆಯಲ್ಲ. ಅದೊಂದು ಸಮಷ್ಟಿ ತಪಸ್ಸು. ನಮ್ಮ ಸುತ್ತಲಿನ ಸಮಾಜ ಮತ್ತು ಆಧುನಿಕ ಜಗತ್ತನ್ನು ನೋಡಿದಾಗ ನಾವೆಲ್ಲರೂ ಎತ್ತ ಸಾಗುತ್ತಿದ್ದೇವೆಂಬ ಆತಂಕ ಕಾಡುತ್ತದೆ. ಇಂದಿನ ಮನುಷ್ಯ ತನ್ನದೇ ಆದ ಸಂಕುಚಿತ ಕನ್ನಡಿಯ ಮುಂದೆ ನಿಂತು ತನ್ನ ಮುಖವನ್ನು ತಾನೇ ನೋಡಿ ಬೀಗುವ ಆತ್ಮಸಂವಾದಿ ಎಂಬ ಮಹಾಲೋಕಕ್ಕೆ ಬಲಿಯಾಗಿದ್ದಾನೆ. ಪಕ್ಕದ ಮನುಷ್ಯನ ಕಣ್ಣೀರನ್ನು ಕಾಣದಷ್ಟು ಇನ್ನೊಬ್ಬರ ನೋವಿಗೆ ಮಿಡಿಯದಷ್ಟು ನಮ್ಮ ಸ್ವಂತ ಅಹಂಕಾರದ ಪರದೆಗಳು ನಮ್ಮ ಕಣ್ಣುಗಳನ್ನು ಮುಚ್ಚಿಬಿಟ್ಟಿವೆ ಎಂದು ಬೇಸರವ್ಯಕ್ತಪಡಿಸಿದರು.

ಪ್ರತಿಯೊಂದನ್ನೂ ಪ್ರದರ್ಶನ ತೋರಿಕೆಯ ಆಡಂಬರ ಮತ್ತು ಕೃತಕ ಹೊಗಳಿಕೆಗಳಲ್ಲಿಯೇ ಅಳಿಯುವ ಕಣ್ಣೀರು ನಮ್ಮನ್ನು ಆವರಿಸಿವೆ. ನಾವು ಜಗತ್ತಿನಲ್ಲಿ ಎಷ್ಟೇ ಮುನ್ನಡೆ ಸಾಧಿಸಿದರೂ ಹಿಂದೆ ಬಿಟ್ಟುಬಂದ ಮೌಲ್ಯಗಳನ್ನು ಹುಡುಕಿಕೊಳ್ಳದಿದ್ದರೆ ನಮ್ಮ ಯಾವ ಸಾಧನೆಗೂ ಬೆಲೆ ಇರುವುದಿಲ್ಲ. ತನ್ನದೇ ಬೆನ್ನು ತಟ್ಟಿಕೊಳ್ಳುವ ಈ ಅಂಧ ಆತ್ಮ ಸಾಮ್ರಾಜ್ಯದಿಂದ ಹೊರಬಂದು, ಒಬ್ಬರನ್ನೊಬ್ಬರು ಗೌರವಿಸುವ ಸರಳ ಸೌಜನ್ಯ, ಒಬ್ಬರ ಕಷ್ಟಕ್ಕೆ ಮತ್ತೊಬ್ಬರು ಕೈಚಾಚುವ ನಿಷ್ಕಲ್ಮಶ ಕಾಳಜಿ ಇಂದಿನ ಎಲ್ಲರ ಬದುಕಿಗೆ ತುರ್ತಾಗಿ ಬೇಕಿದೆ ಎಂದರು.

ಕನ್ನಡ ಸಂಘದ ಅಧ್ಯಕ್ಷ ಎನ್.ಟಿ.ಅಶೋಕ್ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಚಲನಚಿತ್ರ ನಟ ರಾಮಕೃಷ್ಣ, ಸಂಘದ ಸಂಸ್ಥಾಪಕ ಅಧ್ಯಕ್ಷ ನಾ.ಸು.ನಾಗೇಶ, ಕಾರ್ಯದರ್ಶಿ ಉಮಾ ಶುಭಮೂರ್ತಿ, ಸಂಚಾಲಕ ಲ.ಬಾಲಕೃಷ್ಣ, ಖಜಾಂಚಿ ರಾಜಶೇಖರ, ಮಾಜಿ ಅಧ್ಯಕ್ಷರಾದ ರಮಾನಂದ, ಮೀರಾ ಬಾಲಕೃಷ್ಣ, ಎನ್.ನಟರಾಜ್, ಪ್ರಶಾಂತ್‌ಮಧು, ಎಂ.ಎನ್. ಮಂಜುನಾಥ್, ಸದಸ್ಯರಾದ ಪುಟ್ಟಮ್ಮ ಮಾಯಣ್ಣಗೌಡ, ಎನ್.ಮುರಳೀಧರ, ಎನ್.ಸಿ.ಶಿವಕುಮಾರ್, ಈರಪ್ಪ, ಶಿವಣ್ಣಗೌಡ, ಪ್ರಶಾಂತ್, ರತ್ನಮ್ಮ, ಗೀತಾದಾಸೇಗೌಡ ಸೇರಿದಂತೆ ಹಲವರು ಇದ್ದರು.

ಕಪಿಲಾ ನದಿಯಲ್ಲಿ ಅದ್ಧೂರಿ ತೆಪ್ಪೋತ್ಸವ



ತಿ.ನರಸೀಪುರ: ಪಟ್ಟಣದ ಪುರಾತನ ಪ್ರಸಿದ್ಧ ಶ್ರೀ ಗುಂಜಾನರಸಿಂಹಸ್ವಾಮಿ ದೇವಾಲಯದಲ್ಲಿ ಭಾನುವಾರ ರಾತ್ರಿ ಕಾರ್ತಿಕ ಮಾಸದ ಪ್ರಯುಕ್ತ ಸೇವಾ ಸಮಿತಿಯ ವತಿಯಿಂದ ಹಮ್ಮಿಕೊಂಡಿದ್ದ 15ನೇ ವರ್ಷದ ಲಕ್ಷ ದೀಪೋತ್ಸವ ಹಾಗೂ ಪವಿತ್ರ ಕಪಿಲಾ ನದಿಯಲ್ಲಿ ತೆಪ್ಪೋತ್ಸವ ಕಾರ್ಯಕ್ರಮವು ಭಕ್ತರ ಸಡಗರ, ಸಂಭ್ರಮದೊಂದಿಗೆ ವಿಜೃಂಭಣೆಯಿಂದ ನೆರವೇರಿತು.

ದೀಪೋತ್ಸವದ ಅಂಗವಾಗಿ ಬೆಳಗ್ಗೆಯಿಂದಲೇ ದೇವಾಲಯದಲ್ಲಿ ಧಾರ್ಮಿಕ ವಿಧಿವಿಧಾನಗಳು ಆರಂಭಗೊಂಡಿದ್ದವು. ಮೂಲ ವಿಗ್ರಹಕ್ಕೆ ವಿಶೇಷ ಅಭಿಷೇಕ, ಹೋಮ-ಹವನ, ವಿಶೇಷ ಪೂಜೆ ಹಾಗೂ ಮಹಾಮಂಗಳಾರತಿ ನೆರವೇರಿಸಲಾಯಿತು. ಪಡುವಣದಿ ಸೂರ್ಯಾಸ್ತವಾಗುತ್ತಿದ್ದಂತೆ ತ್ರಿವೇಣಿ ಸಂಗಮದ ತೀರದಲ್ಲಿರುವ ದೇವಾಲಯದ ಆವರಣದಲ್ಲಿ ಜ್ಯೋತಿ ಬೆಳಗಲು ಆರಂಭವಾಯಿತು.

ಕಾರ್ಯಕ್ರಮದ ಯಶಸ್ಸಿಗಾಗಿ ಪಟ್ಟಣದ ನೂರಾರು ಭಕ್ತರು ಬೆಳಿಗ್ಗೆಯಿಂದಲೇ ದೇವಾಲಯದ ಆವರಣಕ್ಕೆ ಆಗಮಿಸಿ ಸ್ವಯಂಸೇವೆಯಲ್ಲಿ ತೊಡಗಿಸಿಕೊಂಡಿದ್ದರು. ದೇವಾಲಯದ ಪ್ರಾಂಗಣದಾದ್ಯಂತ ಆಕರ್ಷಕ ರಂಗೋಲಿ ಚಿತ್ತಾರಗಳನ್ನು ಬಿಡಿಸಿ, ಲಕ್ಷಾಂತರ ಮಣ್ಣಿನ ಹಣತೆಯನ್ನು ಜೋಡಿಸಿ, ಅವುಗಳಿಗೆ ಎಣ್ಣೆ ಮತ್ತು ಬತ್ತಿಯನ್ನು ಸಜ್ಜುಗೊಳಿಸುವ ಮೂಲಕ ಲಕ್ಷ ದೀಪೋತ್ಸವಕ್ಕೆ ವಿಶೇಷ ಮೆರಗು ನೀಡಿದರು.

ಸಂಜೆ ಕತ್ತಲಾಗುತ್ತಿದ್ದಂತೆ ಪಟ್ಟಣ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳಿಂದ ಆಗಮಿಸಿದ್ದ ಸಹಸ್ರಾರು ಭಕ್ತರು ಭಕ್ತಿಭಾವದಿಂದ ಹಣತೆಗಳನ್ನು ಹಚ್ಚಿದರು. ಲಕ್ಷ ದೀಪಗಳ ಬೆಳಕಿನಲ್ಲಿ ಇಡೀ ದೇವಾಲಯದ ಆವರಣ ಕಂಗೊಳಿಸುತ್ತಿತ್ತು. ಭಕ್ತರು ದೀಪಗಳನ್ನು ಬೆಳಗಿ ಶ್ರೀ ಗುಂಜಾನರಸಿಂಹಸ್ವಾಮಿಗೆ ವಿಶೇಷ ಪ್ರಾರ್ಥನೆ ಸಲ್ಲಿಸಿದರು.

ತಿ. ನರಸೀಪುರ ಪುರಸಭೆ ಮುಖ್ಯಾಧಿಕಾರಿ ಸಿ.ಶ್ರೀನಿವಾಸ್ ಮಾತನಾಡಿ, ಲಕ್ಷ ದೀಪೋತ್ಸವದ ಹಿನ್ನೆಲೆಯಲ್ಲಿ ಪುರಸಭೆ ವತಿಯಿಂದ ಭಕ್ತಾದಿಗಳಿಗೆ ಅನುಕೂಲಕರವಾಗಲಿ ಎಂದು ದೇವಸ್ಥಾನದ ಆವರಣ ಹಾಗೂ ತೇಪ್ಪೋತ್ಸವ ನಡೆಯುವ ನದಿಯ ಪಾತ್ರದಲ್ಲಿ ಸ್ವಚ್ಛತೆಯನ್ನ ಗೊಳಿಸುವ ಮೂಲಕ ಭಕ್ತರಿಗೆ ಅನುಕೂಲ ಕಲ್ಪಿಸಿಕೊಡಲಾಗಿದೆಂದರು.

ನಂತರ ಶ್ರೀ ಗುಂಜಾನರಸಿಂಹಸ್ವಾಮಿಯ ಉತ್ಸವ ಮೂರ್ತಿಯನ್ನು ಸಕಲ ವಾದ್ಯಗೋಷ್ಠಿಗಳೊಂದಿಗೆ ಪವಿತ್ರ ಕಪಿಲಾ ನದಿಯ ತೀರಕ್ಕೆ ಕೊಂಡೊಯ್ಯಲಾಯಿತು. ಸೇವಾ ಸಮಿತಿಯ ಪದಾಧಿಕಾರಿಗಳು, ಸದಸ್ಯರು ಹಾಗೂ ಸ್ಥಳೀಯ ಮುಖಂಡರು ಉಪಸ್ಥಿತರಿದ್ದು, ಆಗಮಿಸಿದ್ದ ಭಕ್ತರಿಗೆ ಪ್ರಸಾದ ವಿನಿಯೋಗದ ವ್ಯವಸ್ಥೆ ಮಾಡಿದ್ದರು.



ಯರೇಹಳ್ಳಿಯಲ್ಲಿ ಕೆಪಿಶಾಲೆ ನಿರ್ಮಾಣಕ್ಕೆ ಸಚಿವ ಎಸ್. ಮಧು ಬಂಗಾರಪ್ಪ ಶಂಕು

ಮುಂದಿನ ವರ್ಷ 18 ಸಾವಿರ ಶಿಕ್ಷಕರ ನೇಮಕಕ್ಕೆ ಕ್ರಮ

ರಾಮನಗರ: ಮಕ್ಕಳ ಭವಿಷ್ಯಕ್ಕಾಗಿ ಮುಂದಿನ ಒಂದೂವರೆ ತಿಂಗಳೊಳಗೆ 4,300 ಕೋಟಿ ರೂ. ವೆಚ್ಚದ 1,325 ಕರ್ನಾಟಕ ಪಬ್ಲಿಕ್ ಶಾಲೆಯನ್ನು ರಾಜ್ಯದಲ್ಲಿ ಒಂದೇ ಬಾರಿ ಉದ್ಘಾಟನೆ ಮಾಡಲಾಗುವುದು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಎಸ್. ಮಧು ಬಂಗಾರಪ್ಪ ತಿಳಿಸಿದರು.

ತಾಲೂಕಿನ ಕೂಟಗಲ್ ಹೋಬಳಿಯ ಯರೇಹಳ್ಳಿ ಗ್ರಾಮದಲ್ಲಿ ನೂತನ ಕೆಪಿಎಸ್ ಶಾಲೆಯ ನಿರ್ಮಾಣ ಹಾಗೂ ಕೂಟಗಲ್ ಹೋಬಳಿ ವ್ಯಾಪ್ತಿಯ ವಿವಿಧ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ ಹಾಗೂ ಶಂಕುಸ್ಥಾಪನೆ ಸಮಾರಂಭದಲ್ಲಿ ಮಾತನಾಡಿ, ಈ ಕೆಪಿಎಸ್ ಶಾಲೆಗಳಲ್ಲಿ ಕಂಪ್ಯೂಟರ್ ಕಲಿಕೆ, ಎಐ ಕಲಿಕೆ ಸೇರಿದಂತೆ ಕೌಶಲ್ಯಾಭಿವೃದ್ಧಿ ಶಿಕ್ಷಣಗಳನ್ನು ನೀಡಲಾಗುವುದು. ಸರ್ಕಾರಿ ಶಾಲೆಗಳ ಬಲವರ್ಧನೆಗಾಗಿ ಮುಂದಿನ ವರ್ಷ 18 ಸಾವಿರ ಶಿಕ್ಷಕರ ನೇಮಕಕ್ಕೆ ಕ್ರಮವಹಿಸಲಾಗುವುದು ಎಂದು ತಿಳಿಸಿದರು.

ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳು ರಾಜ್ಯದ ಎಲ್ಲಾ ಜನರಿಗೆ ಚೆನ್ನಾಗಿ ತಲುಪುತ್ತಿದೆ. ಮಕ್ಕಳಿಗೆ ಎಲ್‌ಕೆಜಿ ಯಿಂದ ದ್ವಿತೀಯ ಪಿ.ಯು.ಸಿ ವರೆಗೆ ಒಂದೇ ಸೂರಿನಡಿ ಶಿಕ್ಷಣ ನೀಡುವ ಮಹತ್ತಾಕಾಂಕ್ಷಿಯೊಂದಿಗೆ ಸರ್ಕಾರ ಕೆಪಿಎಸ್ ಶಾಲೆಗಳನ್ನು ನೀಡಿದೆ. ಮುಖ್ಯಮಂತ್ರಿಗಳ ನಿರ್ದೇಶನದಂತೆ ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ ಸಿಎಸ್‌ಆರ್ ಯೋಜನೆಯಡಿಯಲ್ಲಿ ಕೆಪಿಎಸ್ ಶಾಲೆಗಳ ಅಭಿವೃದ್ಧಿ



ಮಾಡಿರುವುದು ಪ್ರಶಂಸನೀಯವಾಗಿದೆ ಎಂದರು.

ಪಶುಸಂಗೋಪನೆ, ರೇಷ್ಮೆ ಸಚಿವ ಸಿ. ಪುಟ್ಟರಂಗಶೆಟ್ಟಿ ಮಾತನಾಡಿ, ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ 2,45,476 ಜಾನುವಾರುಗಳಿದ್ದು, 129 ಪಶು ವೈದ್ಯ ಸಂಸ್ಥೆಗಳಿವೆ. ಹಾಲಿನ ದರ ಹೆಚ್ಚಾದ ನಂತರ 10 ಲಕ್ಷಕ್ಕೂ ಹೆಚ್ಚು ಲೀಟರ್ ಹಾಲು ಉತ್ಪಾದನೆಯಾಗುತ್ತಿದೆ. ಜಿಲ್ಲೆಯಲ್ಲಿ ಈಗಾಗಲೇ ಮೇವಿನ ಕಿಟ್‌ಗಳನ್ನು ವಿತರಿಸಲಾಗಿದ್ದು, ಅಗತ್ಯವಿದ್ದರೆ ಆರು ಲಕ್ಷ ಮೇವಿನ ಕಿಟ್‌ಗಳನ್ನು ರೈತರಿಗೆ ನೀಡಲಾಗುವುದು ಎಂದರು.

ಪಶು ಸಾಕಾಣಿಕೆಗೆ ಅನುವಾಗಲು ಕೌ ಮ್ಯಾಟ್‌ಗಳನ್ನು ನೀಡಲಾಗುತ್ತಿದೆ. 657 ಫಲಾನುಭವಿಗಳಿಗೆ ಕೋಳಿ ಮರಿಯನ್ನು ನೀಡಲಾಗಿದೆ. ಅನುಗ್ರಹ ಯೋಜನೆಯಲ್ಲಿ ಪಶುಗಳ ಸಾವಿಗೆ ಪರಿಹಾರ ಒದಗಿಸಲಾಗಿದೆ. ಪಶು ಸಂಗೋಪನಾ ಇಲಾಖೆಯಲ್ಲಿ ವೈದ್ಯರ, ಸಿಬ್ಬಂದಿ ಕೊರತೆ ಇದೆ. ಅದಕ್ಕಾಗಿ 300 ಪಶುವೈದ್ಯರನ್ನು ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲಾಗುವುದು ಎಂದರು. ಒಂದು ಸಾವಿರ ಗ್ರೂಪ್ ಡಿ ಹುದ್ದೆಗಳನ್ನು ತುಂಬಲು ಕ್ರಮ ವಹಿಸಲಾಗುವುದು. 50 ಲಕ್ಷ ರೂ. ವೆಚ್ಚದಲ್ಲಿ ಯರೇಹಳ್ಳಿಯ ಪಶುವೈದ್ಯ ಆಸ್ಪತ್ರೆ ನಿರ್ಮಾಣಕ್ಕೆ ಇಂದು ಶಂಕುಸ್ಥಾಪನೆ ನೆರವೇರಿಸಲಾಗುತ್ತಿದೆ, 6 ಪಶುವೈದ್ಯ ಶಾಲೆಗಳಿಗೆ ಹಣ ಬಿಡುಗಡೆಯಾಗಿದೆ ಎಂದು ತಿಳಿಸಿದರು. ಸಚಿವ ಎಚ್.ಸಿ.ಬಾಲಕೃಷ್ಣ, ಬಮುಲ್ ಅಧ್ಯಕ್ಷ ಡಿ.ಕೆ. ಸುರೇಶ್, ವಿಧಾನ ಪರಿಷತ್ ಸದಸ್ಯ ಎಸ್. ರವಿ, ಮಾಜಿ ಸದಸ್ಯ ಸಿ.ಎಂ. ಲಿಂಗಪ್ಪ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಕೆ. ರಾಜು, ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಎಲ್. ಚಂದ್ರಶೇಖರ್, ಬಮುಲ್ ನಿರ್ದೇಶಕ ಪಿ. ನಾಗರಾಜು, ಜಿಲ್ಲಾಧಿಕಾರಿ ಯಶವಂತ್ ವಿ. ಗುರುಕರ್ ಇದ್ದರು.

ಮಾರ್ನಿಂಗ್ ಕೋಲ

ಲಾರ್ಡ್ ಗಾಗ ಚಿತ್ರದ ಟೀಸರ್ ಬಿಡುಗಡೆ



ಮುಕಿ ರಘುನಾಥನ್ ಅವರ ನಿರ್ಮಾಣದ, ವಿಭಿನ್ನ ಟೈಟಲ್ ಒಳಗೊಂಡ ಲಾರ್ಡ್ ಗಾಗ ಒಂದು 'ರೊಮ್ಯಾಂಟಿಕ್ ಥ್ರಿಲ್ಲರ್' ಚಿತ್ರ. ಇತ್ತೀಚೆಗೆ ತನ್ನ ಟೈಟಲ್ ಮೂಲಕವೇ ಸುದ್ದಿಯಾಗಿದ್ದ ಈ ಚಿತ್ರದ ಟೀಸರ್ ಇದೀಗ ರಿಲೀಸಾಗಿದೆ. ಟೈಟಲ್‌ಗೆ ತಕ್ಕಂತೆ ಬಿಡುಗಡೆಯಾದ ಟೀಸರ್ ನಲ್ಲಿಯೂ ಹೊಸತನ ಎದ್ದು ಕಾಣುವಂತಿತ್ತು. ನಿರ್ದೇಶಕ ವೈ.ಕೆ ಈ ಚಿತ್ರಕ್ಕೆ ಆ?ಯಕ್ಷನ್ ಕಟ್ ಹೇಳಿದ್ದಾರೆ. ಟೀಸರ್ ಜತೆಗೆ ಪ್ರದರ್ಶಿಸಲಾದ ಪೋಸ್ಟರ್ ಕೂಡ ತಲೆಗೆ ಕೆಲಸ ನೀಡುವಂತಿತ್ತು. ಮೆದುಳಿನ ಮೇಲೆ ಚಿಪ್ಪಲಿ ಇಟ್ಟಿರುವ ಚಿತ್ರಗಳು ಕೂಡ ಇಲ್ಲಿದ್ದವು. ಅದರ ಅರ್ಥ ಪ್ರತಿಯೊಂದು ಹೆಜ್ಜೆಯನ್ನು ಕೂಡ ನೋಡಿಕೊಂಡು ಇಡಬೇಕು ಎನ್ನುವುದಾಗಿತ್ತು. ದೇವರ ಸೃಷ್ಟಿ ಅದ್ಭುತವಾಗಿದೆ. ಅದನ್ನು ಅರ್ಥ ಮಾಡಬೇಕಿದೆ ಎಂದು ವಿವರಿಸಿದ ನಿರ್ದೇಶಕರು, ಪ್ರತಿಯೊಂದರ ಅರ್ಥ ತಿಳಿಯಬೇಕಾದರೆ ಪ್ರೇಕ್ಷಕರು ಈ ಚಿತ್ರವನ್ನು ನೋಡಲೇಬೇಕು ಎಂದರು.

ಮುಖ್ಯವಾಗಿ ಈ ಚಿತ್ರದಲ್ಲಿ ನಾವು ಇನ್ನೊಬ್ಬರ ಬಗ್ಗೆ ನಿರೀಕ್ಷೆ ಇಡುವುದು ತಪ್ಪು ಎನ್ನುವ ಸಂದೇಶವನ್ನು ಹೇಳಹೊರಟಿದ್ದೇವೆ. ಯಾಕೆಂದರೆ ನಮ್ಮದೇ ಉಗುರು, ತಲೆಗೂದಲು, ಹೃದಯ ಮೊದಲಾದವು ಅವುಗಳ ಇಷ್ಟದ ಹಾಗೆ ಕೆಲಸ ಮಾಡುತ್ತವೆ. ನಮ್ಮ ಅವಯವಗಳೇ ನಮ್ಮ ನಿಯಂತ್ರಣದಲ್ಲಿ ಇಲ್ಲ ಎಂದ ಮೇಲೆ ಎದುರು ಭಾಗದವರು ನಮ್ಮ ಮಾತು ಕೇಳಬೇಕು ಎಂದು ಬಯಸಬಾರದು ಎನ್ನುವುದನ್ನು ತೋರಿಸಲಾಗಿದೆ. ಒಟ್ಟಿನಲ್ಲಿ ಇದನ್ನೊಂದು ಕೌಟುಂಬಿಕ ಚಿತ್ರವಾಗಿಯೇ ನಿರ್ಮಾಣ ಮಾಡಿದ್ದೇವೆ. ಕುಟುಂಬ ಸಮೇತ ನೋಡಬೇಕಾದ ಚಿತ್ರ ಎಂದು ನಿರ್ದೇಶಕರು



ಹೇಳಿದರು.

ಇದೇ ಸಂದರ್ಭದಲ್ಲಿ ಈ ಚಿತ್ರದ ಹೈಯಾದೆ' ಎನ್ನುವ ಸೆಲೆಬ್ರೇಷನ್ ಹಾಡನ್ನು ಬಿಡುಗಡೆಗೊಳಿಸಲಾಯಿತು. ಈ ಚಿತ್ರದಲ್ಲಿ ಒಟ್ಟು 6 ಹಾಡುಗಳಿದ್ದು, ಕೆ. ಹೇಮಂತ್ ಕುಮಾರ್, ಆದಿಲ್ ನಡಾಫ್ ಮತ್ತು ಶಿವೋಂ ಎನ್ನುವ ಮೂವರು ಸಂಗೀತ ನೀಡಿದ್ದಾರೆ. ಪ್ರಮುಖ ಪಾತ್ರವನ್ನೂ ಮಾಡಿರುವ ನಿರ್ಮಾಪಕ ಮುಕಿ ರಘುನಾಥನ್ ಮಾತನಾಡಿ, ನಾನು ಚಿತ್ರರಂಗದಲ್ಲಿ ಕೇವಲ 18 ತಿಂಗಳ ಮಗು. ಇದು ನನ್ನ 24ನೇ ಬಿಸ್ನೆಸ್. ಇತ್ತೀಚೆಗೆ ಚಿತ್ರಗಳು ಸೋಲುತ್ತಿವೆ. ಆದರೆ ಗೆಲ್ಲಬಲ್ಲೆವು ಎನ್ನುವ ಧೈರ್ಯದೊಂದಿಗೆ ಈ ಚಿತ್ರವನ್ನು ಮಾಡಿದ್ದೇವೆ. ಈ ಲಾರ್ಡ್ ಗಾಗ ಚಿತ್ರವನ್ನು 'ಪ್ರೇಮದ ಊರಲಿ' ಚಿತ್ರದ ವಿತರಕ ಪ್ರಶಾಂತ್ ವಿತರಣೆ ಮಾಡುತ್ತಿದ್ದಾರೆ ಎಂದರು.

ವಿತರಕ ಪ್ರಶಾಂತ್ ಮಾತನಾಡುತ್ತಾ 'ಪ್ರೇಮದ ಊರಲಿ' ಪ್ರಚಾರಕ್ಕೆ 7 ತಿಂಗಳು ತೆಗೆದುಕೊಂಡಿದ್ದೆವು. ಮಿನಿಮಂ 6 ತಿಂಗಳು ಖಂಡಿತವಾಗಿ ಬೇಕು ಎಂದರು.

ಸತ್ಯ ಘಟನೆ ಆಧಾರಿತ ಸೆಸ್ಪೆನ್ಸ್ ಥ್ರಿಲ್ಲರ್ ಕಾಲಾಗ್ನ



ಒಂದನವನದಲ್ಲಿ ನೈಜ ಘಟನೆಯ ಕಂಟೆಂಡ್ ಬಳಸಿಕೊಂಡು ಹೆಚ್ಚಿನ ಚಲನಚಿತ್ರಗಳು ನಿರ್ಮಾಣವಾಗುತ್ತಿವೆ. ಅದಕ್ಕೆ ತಕ್ಕಂತೆ ನೋಡುಗರು ಸಹ ಇಂತಹ ಸಿನಿಮಾಗಳನ್ನೇ ಇಷ್ಟಪಡುತ್ತಿದ್ದಾರೆ. ಆ ಸಾಲಿಗೆ ಈಗ ಮತ್ತೊಂದು ಹೊಸಬರ ಚಿತ್ರ ಕಾಲಾಗ್ನಿ ಹೊಸ ಸೇರ್ಪಡೆಯಾಗಿದೆ. 'ನ